ಅ) ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಜಿಲ್ಲಾ ಪಂಚಾಯತ್ ಸದಸ್ಯರ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತೆ?

ಆ) ಹಾಗಿದ್ದಲ್ಲಿ ಆ ಸಮಿತಿಯು ಯಾವಾಗ ತನ್ನ ವರದಿಯನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಿತು? ಆ ವರದಿಯ ಶಿಫಾರಸ್ಸುಗಳೇನು?

ಇ) ಸದರಿ ಸಮಿತಿಯು ತನ್ನ ವರದಿಯಲ್ಲಿ ಶಿಫಾರಸ್ಸಿನಲ್ಲಿ ಈ ಪ್ರಕರಣವನ್ನು ಸಿ.ಒ.ಡಿ.ಗೆ ವಹಿಸಬೇಕೆಂದು ತಿಳಿಸಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸಿ.ಒ.ಡಿ. ತನಿಖೆಗೆ ಆದೇಶ ನೀಡಲಾಗಿದೆಯೇ ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಆರೋಗ್ಯ ಇಲಾಖೆಯಲ್ಲಿ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಕೆಲವೊಂದು ಜಿಲ್ಲಾ ಪರಿಷತ್ ಸದಸ್ಯರ ಆರೋಪ ನಿಜ.

ಆ) ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ವಿಚಾರಣೆ ನಡೆಸಲು ಶ್ರೀ ಪ್ರದೀಪ ಕುಶನೂರ ಜಿಲ್ಲಾ ಪಂಚಾಯತ್ ಸದಸ್ಯರು ಇವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿತ್ತು.

ಇ) ಈ ವಿಷಯದಲ್ಲಿ ಇನ್ನೂ ಸರ್ಕಾರಕ್ಕೆ ವರದಿ ಬಂದಿರುವುದಿಲ್ಲ.

ಈ) ಈ ವಿಷಯದಲ್ಲಿ ಜಿಲ್ಲಾ ಪಂಚಾಯತ್ ದಿಂದ ಯಾವುದೇ ಪ್ರಸ್ತಾಪ ಬಂದಿರುವುದಿಲ್ಲಾ.

ಶಿರಾ ತಾಲ್ಲೂಕು ಕೀಲಾರದ ಹಳ್ಳಿ ಬಳಿ ರಂಗನಾಥ ರಾಜ್ಯ ಅರಣ್ಯದಲ್ಲಿ ಜಮೀನಿನ ಬಿಡುಗಡೆ ಕೋರಿಕೆ

879 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಕೀಲಾರದ ಹಳ್ಳಿ ಬಳಿ ಕಟ್ಟಲು ಉದ್ದೇಶಿಸಿರುವ ಕೆರೆಗಾಗಿ ರಂಗನಾಥಪುರ ರಾಜ್ಯ ಅರಣ್ಯದಲ್ಲಿ ಜಮೀನಿನ ಬಿಡುಗಡೆ ಕೋರಿ ಪ್ರಸ್ತಾವನೆ ಅರಣ್ಯ ಇಲಾಖೆಯ ಮುಂದಿದ್ದು ಇದುವರೆವಿಗೂ ಯಾವುದೇ ಪ್ರಗತಿಯನ್ನು ಕಾಣದೆ ಇರುವ ವಿಷಯ ನಿಜವೆ.

ಆ) ಅನೇಕ ವರ್ಷದಿಂದ ಈ ಯೋಜನೆ ಅರಣ್ಯ ಇಲಾಖೆಯಿಂದ ತಡೆಯಿಂದಾಗಿ ಕೆರೆ ಕೆಲಸ ಕೈಗೊಳ್ಳುವ ಕಾರ್ಯ ಮುಂದಕ್ಕೆ ಹೋಗಿರುವುದು ನಿಜವೆ.

ಇ) ತತಕ್ಷಣ ಸರ್ಕಾರ ಕೆರೆ ನಿರ್ಮಾಣ ಕಾರ್ಯ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ, ಈ ಸಂಬಂಧ 18.25 ಹೆಕ್ಟೇರ್ ಅರಣ್ಯ ಜಮೀನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದ್ದು, ಅದನ್ನು ದಿನಾಂಕ: 21-8-1995ರಂದು ಕೇಂದ್ರ ಸರ್ಕಾರಕ್ಕೆ ಅರಣ್ಯ